

# ಜಾನ್ ಅಬ್ರಾಹಂ

ಭಾರತೀಯ ಚಿತ್ರರಂಗದಲ್ಲಿ ನಕ್ಷತ್ರದಂತೆ ಬೆಳಗಿ ಮಾಯವಾದ ಪ್ರತಿಭೆ ಜಾನ್ ಅಬ್ರಹಾಂ. ನಿರ್ದೇಶಕನಾಗಿ, ಚಳವಳಿಕಾರನಾಗಿ, ಕಥೆಗಾರನಾಗಿ ಅವರು ನೀಡಿದ ಕೊಡುವ ಮಹತ್ವದ್ದು. ಜಾನ್ ಹುಟ್ಟಿದ್ದು 1937ರ ಆಗಸ್ಟ್ 11ರಂದು. ಅಲುಪ್ಪುಳದ ಕುಟ್ಟನಾಡಿನಲ್ಲಿ ಹುಟ್ಟಿದ ಅವರು ತಮ್ಮ 49ನೇ (1987) ವಯಸ್ಸಿಗೇ ಮರಣಹೊಂದಿದರು.

ಅವರು ನಿರ್ದೇಶಿಸಿದ ಸಿನಿಮಾಗಳೂ ನಾಲ್ಕು. ಆ ನಾಲ್ಕು ಚಿತ್ರಗಳೇ ಅವರ ಹೆಸರನ್ನು ಅಜರಾಮರಗೊಳಿಸಿವೆ. 1986ರಲ್ಲಿ ತಯಾರಾದ 'ಅಮ್ಮಾ ಅರಿಯಾನ್' ಚಿತ್ರ ಹಲವು ಕಾರಣಗಳಿಗೆ ಮಹತ್ವದ ಪ್ರಯೋಗ. ಬ್ರಿಟಿಶ್ ಫಿಲ್ಮ್ ಇನ್‌ಸ್ಟಿಟ್ಯೂಟ್ ತಯಾರಿಸಿದ 'ಹತ್ತು ಭಾರತೀಯ ಸಾರ್ವಕಾಲಿಕ ಶ್ರೇಷ್ಠ ಸಿನಿಮಾ ಪಟ್ಟಿ'ಯಲ್ಲಿ ಅಮ್ಮಾ ಅರಿಯಾನ್ ಇದೆ. 'ಅಗ್ರಹಾರತ್ತಿಲ್ ಕಝುತೈ' ಚಿತ್ರವೂ ಐಬಿಎನ್ ತಯಾರಿಸಿದ ನೂರು ಸಾರ್ವಕಾಲಿಕ ಶ್ರೇಷ್ಠ ಚಿತ್ರಗಳ ಪಟ್ಟಿಯಲ್ಲಿ ಸ್ಥಾನ ಪಡೆದಿದೆ.

1984ರಲ್ಲಿ ಸಮಾನ ಮನಸ್ಕ ಸ್ನೇಹಿತರ ಜತೆ ಸೇರಿ ರೂಪಿಸಿದ 'ಒಡೆಸ್ಸಾ ಕಲೆಕ್ಟೀವ್' ಎಂಬ ಸಂಘಟನೆ ಭಾರತೀಯ ಚಿತ್ರರಂಗದ ಇತಿಹಾಸದಲ್ಲಿ ಬಹುಮುಖ್ಯ ಪ್ರಯೋಗ. 'ಜನರನ್ನು ಒಳಗೊಳ್ಳುವುದರ ಮೂಲಕ ಸಿನಿಮಾ ಮಾಧ್ಯಮಕ್ಕೆ ಹೊಸ ಶಕ್ತಿ ಮತ್ತು ವಿಸ್ತಾರವನ್ನು ತಂದುಕೊಡುವುದು' ಈ ಸಂಘಟನೆಯ ಮುಖ್ಯ ಉದ್ದೇಶವಾಗಿತ್ತು. ಜನರಿಂದಲೇ ಹಣ ಸಂಗ್ರಹಿಸಿ ಅದರಿಂದ ಸಿನಿಮಾ ತಯಾರಿಸಿ ಜನರಿಗೆ ಪ್ರದರ್ಶಿಸುವ ಅನನ್ಯ ಮಾದರಿಯೊಂದನ್ನು ಈ ಸಂಘಟನೆ ಅನುಸರಿಸಿತು. ಸಿನಿಮಾ ಎನ್ನುವುದು ಸಾಮಾಜಿಕ ಜಾಗೃತಿಯ ಪ್ರಬಲ ಮಾಧ್ಯಮ ಎಂದು ಜಾನ್ ನಂಬಿದ್ದರು ಎನ್ನುವುದಕ್ಕೆ 'ಅಮ್ಮಾ ಅರಿಯಾನ್' ಚಿತ್ರದ ಆರಂಭದಲ್ಲಿ ಅವರು ಉಲ್ಲೇಖಿಸಿರುವ 'ಒಡಿಸ್ಸಾ' ಸಂಘಟನೆಯ ಉದ್ದೇಶಗಳೇ ಸಾಕ್ಷಿ.

ಇಂಥ ಪ್ರತಿಭಾವಂತ ನಿರ್ದೇಶಕನ ಸಾವು ಮಾತ್ರ ದಾರುಣವಾಗಿತ್ತು. 1987ರ ಮೇ 30ರಂದು ಪಾರ್ಟಿಯಲ್ಲಿ ಪಾಲ್ಗೊಂಡಿದ್ದ ಜಾನ್, ಮನೆಯ ಟೆರೇಸಿನ ಮೇಲಿನಿಂದ ಬಿದ್ದರು. ಗಾಯಗೊಂಡ ಅವರನ್ನು ಕೋಲ್ಕತ್ತ ವೈದ್ಯಕೀಯ ಕಾಲೇಜಿಗೆ ಸೇರಿಸಲಾಯಿತು. ಆದರೆ ಅಲ್ಲಿ ಯಾರೂ ಅವರನ್ನು ಗುರುತಿಸಲಿಲ್ಲ. ಸರಿಯಾದ ಚಿಕಿತ್ಸೆಯನ್ನೂ ಕೊಡಲಿಲ್ಲ. ಆಂತರಿಕ ರಕ್ತಸ್ರಾವದಿಂದ ಮಾರನೇ ದಿನವೇ ಅವರು ಮರಣವನ್ನಪ್ಪಿದರು.

**ಚಿತ್ರ:** ಅಮ್ಮ ಅರಿಯಾನ್
**ನಿರ್ದೇಶನ:** ಜಾನ್ ಅಬ್ರಹಾಂ
**ಭಾಷೆ:** ಮಲಯಾಳಂ
**ಅವಧಿ:** 1.55 ನಿಮಿಷ